

ಧಾರವಾಡದಲ್ಲಿ ಪ್ರತಿ ವಾರ ನಡೆಯುವ ದನದ ಸಂತೆಯಲ್ಲಿ ಗಲ್ಲಕ್ಕೆ ಕೈ ಆಸರೆಯಾಗಿಸಿಕೊಂಡು ಚಕ್ಕಡಿಯಲ್ಲಿ ಕೂತಿರುವ ಈ ಯಜಮಾನರ ಮನಸ್ಸಿನಲ್ಲಿ ಮಹಾಭಾರತವೇ ನಡೆದಂತಿದೆ...

ಉದ್ಯಮಪತಿಗಳು ಕೃಷಿ ಭೂಮಿಯಲ್ಲಿ ಬಂಡವಾಳ ಹೂಡಿದರೆ ಅದು ಕೃಷಿ, ರೈತನನ್ನು ನಾಶ ಮಾಡಲು ಸಾಧ್ಯವಿಲ್ಲ. ಭೂಮಿ ಇರುವವರೆಗೂ ರೈತ ಇರುತ್ತಾನೆ, ಕೃಷಿಯೂ ಇರುತ್ತದೆ ಎಂದು ಹೇಳುತ್ತಾರೆ.

‘ಉಳುವವನೇ ಭೂಮಿಯ ಒಡೆಯ’ ಎಂಬುದು ಭೂಮಿಯ ಮೌಲ್ಯಕ್ಕೆ ಸಂಬಂಧಿಸಿದ್ದಲ್ಲ, ಮಾಲೀಕತ್ವಕ್ಕೆ ಸಂಬಂಧಪಟ್ಟದ್ದು. ಹಲವು ದಶಕಗಳಿಂದ ಸರ್ಕಾರಗಳು ಭೂಮಿಯ ಮೌಲ್ಯ ಹೆಚ್ಚಿಸುವ ಕೆಲಸ ಮಾಡಿಯೇ ಇಲ್ಲ. ಈ ಕಾರಣಕ್ಕಾಗಿಯೇ ರೈತರ ಹಲವು ಸಮಸ್ಯೆಗಳು ಸಮಸ್ಯೆಯಾಗಿಯೇ ಉಳಿದಿವೆ, ರೈತರ ಆತ್ಮಹತ್ಯೆಗಳು ಮುಂದುವರಿಯುತ್ತಿವೆ. ರಾಜ್ಯದಲ್ಲಿ ಯಾರೂ ಜಮೀನ್ದಾರರಿಲ್ಲ, ಎಲ್ಲರೂ ಸಣ್ಣ ಹಿಡುವಳಿದಾರರೇ ಆಗಿದ್ದಾರೆ. ಬಹುತೇಕ ಸಣ್ಣ ಹಿಡುವಳಿದಾರರು ತಮ್ಮ ತುಂಡು ಭೂಮಿಯನ್ನು ಪಾಳು ಬಿಟ್ಟು ನಗರ, ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ. ಸುತ್ತಲೂ ಇರುವ ರೈತರು ಪಾಳುಬಿದ್ದ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ’ ಎಂದು ಸಮಸ್ಯೆಯ ಮತ್ತೊಂದು ಆಯಾಮದ ಮೇಲೆ ಬೆಳಕು ಚೆಲ್ಲುತ್ತಾರೆ.

ವಿಧಾನಸಭೆಯಲ್ಲಿ 1954ರ ಏಪ್ರಿಲ್ 14ರಂದು ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಶಾಂತವೇರಿ ಗೋಪಾಲಗೌಡರು ಆಡಿದ್ದ ಮಾತುಗಳನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಭೂಮಿಯ ವಿಷಯವಾಗಿ ನಮ್ಮ ಸಮುದಾಯದ ವಿಚಾರಧಾರೆ ಹೇಗೆ ರೂಪಾಂತರ ಹೊಂದಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

‘ನನ್ನ ಅಭಿಪ್ರಾಯದಲ್ಲಿ ಭೂಮಿಯು ಆಸ್ತಿಯ ಪಟ್ಟಿಯಲ್ಲಿ ಸೇರಿರುವುದು ತಪ್ಪು. ಭೂಮಿಯನ್ನು ಆಸ್ತಿ ಪಟ್ಟಿಯಿಂದ ಬಂಧಮುಕ್ತ ಮಾಡಬೇಕು. ಅದು ಉತ್ಪತ್ತಿಯ ಸಾಧನವಾಗಿರುವುದರಿಂದ ಯಾರು ಭೂಮಿಯನ್ನು ಉಳುಮೆ ಮಾಡುತ್ತಾರೋ ಯಾರು ಭೂಮಿಯ ಮೇಲೆ ಕೃಷಿಮಾಡಿ, ಕೆಲಸ ಮಾಡಿ ಅದರಿಂದ ಉತ್ಪನ್ನ ಮಾಡುತ್ತಾರೋ ಆ ಉತ್ಪನ್ನ ಅವರ ಸ್ವತ್ತಾಗಬೇಕು. ಭೂಮಿಯು ಮಾರತಕ್ಕ ಕೊಳ್ಳತಕ್ಕ ವಸ್ತು ಆಗಬಾರದು. ಮನುಷ್ಯನ ಅಸ್ತಿತ್ವಕ್ಕೆ ಅದು ಬಲಿಯಾಗಬಾರದು ಎಂಬ ಒಂದು ನೀತಿಯನ್ನು ನಾವು ಇಟ್ಟುಕೊಳ್ಳುವುದು ಬಹಳ ಉಚಿತ ಎಂದು ಕಾಣುತ್ತೆ’ ಎಂದು ಹೇಳಿದ್ದರು ಗೋಪಾಲಗೌಡರು.

ಬೆಂಗಳೂರಿನ ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕ ನರೇಂದ್ರ ಪಾಣಿ ಅವರು ಗೋಪಾಲಗೌಡರ ಅಭಿಪ್ರಾಯಕ್ಕೆ ಹತ್ತಿರವಾದ ಅಭಿಪ್ರಾಯವನ್ನೇ ಮುಂದಿಡುತ್ತಾರೆ. ಕೃಷಿಭೂಮಿಯು ಕೇವಲ ಆರ್ಥಿಕ ಸರಕಲ್ಲ ಎಂದು ಗುರುತಿಸುವುದು ಸದ್ಯ ನಮ್ಮ ಮುಂದಿರುವ ಕಾರ್ಯಸಾಧ್ಯ ಆಯ್ಕೆ. ಕೃಷಿಭೂಮಿಯು ಕೇವಲ ಆರ್ಥಿಕ ಸುರಕ್ಷಾ ಜಾಲವಲ್ಲ; ಬದಲಾಗಿ ಮದುವೆಯಾಗಬೇಕಾದ ಹೆಣ್ಣುಮಕ್ಕಳಿರುವ ಕುಟುಂಬಗಳಿಗೆ ಸಾಮಾಜಿಕ ಸ್ಥಾನಮಾನವನ್ನೂ ಅದು ನೀಡುತ್ತದೆ. ಸ್ವಾಮಿತ್ವದ ವರ್ಗಾವಣೆಯನ್ನೇ ಮಾಡುವಂತಹ ಅನಿವಾರ್ಯ ಪರಿಸ್ಥಿತಿ ನಿರ್ಮಾಣ ಮಾಡುವುದಕ್ಕಿಂತ ಅರ್ಥವ್ಯವಸ್ಥೆಯ ಹರವು ಹಿಗ್ಗಿಸುವ ಬೇರೆ ದಾರಿಗಳ ಕುರಿತು ಆಲೋಚಿಸಬೇಕಿದೆ ಎನ್ನುವುದು ಅವರ ವಾದದ ಒಟ್ಟು ಸಾರ.

‘ಭೂಬಾಡಿಗೆ ನೀಡುವ ಇಲ್ಲವೆ ಕೃಷಿ ಉತ್ಪನ್ನಗಳನ್ನು ಪಾಲು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಳ್ಳುವ ಮೂಲಕ ಕೃಷಿ ಚಟುವಟಿಕೆಗಳನ್ನು ನಡೆಸುವ ಏಜೆನ್ಸಿಗಳಿವೆ. ಇಂತಹ ಏಜೆನ್ಸಿಗಳು ಹಲವು ಕೃಷಿಕರ ಭೂಮಿಯನ್ನು ಒಪ್ಪಂದದ ಆಧಾರದ ಮೇಲೆ ಪಡೆಯುವುದರಿಂದ ಅವರಿಗೂ ಲಾಭವಾಗಲಿದೆ. ಅದೇ ಕಾಲಕ್ಕೆ ಕೃಷಿಕ, ತನ್ನ ಭೂಮಿಯ ಒಡೆಯನಾಗಿ ಮುಂದುವರಿಯಲಿದ್ದಾನೆ’ ಎನ್ನುವ ಸಲಹೆಗಳನ್ನೂ ಅವರು ನೀಡುತ್ತಾರೆ.

ಕಾಯ್ದೆಗಳಿಗೆ ತರುತ್ತಿರುವ ತಿದ್ದುಪಡಿಗಳು, ನಡೆದಿರುವ ಚರ್ಚೆಗಳ ತಾಣವಾದ ರಾಜಧಾನಿಯಿಂದ ಬಹುದೂರದಲ್ಲಿರುವ ಹಳ್ಳಿಗಳ ರೈತಾಪಿ ಜನರಿಗೆ ಇದ್ಯಾವುದರ ಅರಿವು ಇಲ್ಲ. ಹಣೆಯ ಮೇಲೆ ಕೈಯಿಟ್ಟು ಮುಗಿಲ ಕಡೆ ಮುಖ ಮಾಡುವುದು, ಮಳೆಯ ಸಂಜ್ಞೆಗಳನ್ನು ಅರಿತು ಮುಂದಿನ ಕೃಷಿ ಚಟುವಟಿಕೆಗಳ ಕುರಿತು ನಿರ್ಧಾರ ಮಾಡುವುದು – ಅದರಲ್ಲೇ ಅವರು ನಿರತ. ಮಳೆಯಾಗಿ ಹಸಿ ಉಂಡ ಭೂಮಿಯ ಕಡೆಗೆ ಉತ್ತಲು, ಬಿತ್ತಲು ಹೊರಟರೆ ರೈತ ನಿಜಕ್ಕೂ ಯೋಗಿಯೇ. ಆದರೆ, ಮಾರುಕಟ್ಟೆ ಕುಸಿತ, ಕೊರೊನಾ ಕುಣಿತ, ಸಾಲದ ಕುಣಿಕೆ ಆತನ ಬದುಕನ್ನು ಹಿಂಡಿ ಹಿಪ್ಪೆ ಮಾಡಿದೆ. ಸಾವಿರ, ಸಾವಿರ ಸಂಖ್ಯೆಯಲ್ಲಿ ರೈತರು ಕೃಷಿಯನ್ನೇ ಕೈಚೆಲ್ಲಿ ಕುಳಿತುಬಿಟ್ಟಿದ್ದಾರೆ. ಅದರ ಪರಿಣಾಮವೇ ಸಂತೆಗಳಿಗೆ ಈ ಪಾಟಿ ಬರುತ್ತಿರುವ ದನಗಳ ರಾಶಿ.

ಜಾನುವಾರು ಸಂತೆಯಲ್ಲಿ ಮೂಗುದಾರ, ಹಗ್ಗ, ಜೂಲ, ಕಿಣಿ ಕಿಣಿ ಎಂಬ ಸದ್ದು ಹೊರಡಿಸುವ ಗಂಟೆ ಸರ, ಬಾರುಕೋಲು, ಗೊಂಡೇವು... ಹೀಗೆ ದನಗಳ ಪ್ರಸಾಧನ ಸಾಮಗ್ರಿಗಳೂ ಇದ್ದವು. ಇಂದಿನ ಕೃಷಿ ಬದುಕನ್ನು ನೆನೆದು ಆಕಾಶವಾಣಿಯಲ್ಲಿ ‘ಕರಿ ಎತ್ತು ಕಾಳಿಂಗ’ ಎಂಬ ಹಾಡಿನ ಜೊತೆಗೆ ಕೇಳಿಬರುತ್ತಿದ್ದ ಕಿಣಿ ಕಿಣಿ ಗಂಟೆ ಸರದ ಸದ್ದನ್ನು ಯಂತ್ರಗಳ ಕರ್ಕಶ ಧ್ವನಿ ನುಂಗಿದಂತೆ ಭಾವ ಕಾಡಿದ್ದು ಸುಳ್ಳಲ್ಲ. ■